Ref.1/2018 MW-111/06/19 1

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :</u>** 1 ನೇ ಪಾರ್ಟಿ ಪರ ಸಹೋದ್ಯೋಗಿ ಶ್ರೀ ಬಿ.ಎಸ್.ಎಸ್.

ನಾನು ಸಂಸ್ಥೆಯಲ್ಲಿ ಸಿಬ್ಬಂದಿ ಮೇಲ್ವಿಚಾರಕನಾಗಿದ್ದೇನೆ. ನಾನು ಈ ಕೇಸಿನಲ್ಲಿ ವಿಚಾರಣಾಧಿಕಾರಿಯಲ್ಲ. ನಾಗಣ್ಣ ಎಂಬುವವರು ವಿಚಾರಣಾಧಿಕಾರಿಯಾಗಿದ್ದರು. ವಿಚಾರಣಾಧಿಕಾರಿ ತಮ್ಮ ಆರೋಗ್ಯ ದೃಷ್ಟಿಯಿಂದ ಸಾಕ್ಷಿ ಹೇಳಲು ಆಗುವುದಿಲ್ಲವೆಂದು ಸಂಸ್ಥೆಗೆ ಪತ್ರ ಕೊಟ್ಟಿಲ್ಲ. ನನಗೆ ಸಾಕ್ಷಿ ನುಡಿಯಲು ಪರವಾನಗಿ ಕೊಟ್ಟಿದ್ದಾರೆ ಆದರೆ ಅದನ್ನು ಹಾಜರುಪಡಿಸಿಲ್ಲ. ನಿಎಂ. 2 ರಲ್ಲಿ ಹೇಳಲಾಗಿರುವುದನ್ನು 1 ನೇ ಪಾರ್ಟಿ ಮೇಲೆ ಆರೋಪ ಮಾಡಲಾಗಿದೆ. ನಿ.ಎಂ.4 ರಲ್ಲಿ ನಾಗಣ್ಣ ರವರು ವಕೀಲರು ಇಲ್ಲವೋ ಎನ್ನುವ ಬಗ್ಗೆ ಸಂಸ್ಥೆಗೆ ಮಾಹಿತಿ ಕೊಟ್ಟಿದ್ದಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಿ.ಎಂ.4 ಅವರ ನೇಮಕಾತಿ ಆದೇಶದಲ್ಲಿ 3 ತಿಂಗಳಲ್ಲಿ ವಿಚಾರಣೆ ನಡೆಸಿ ಆದೇಶ ನೀಡಬೇಕೆಂದು ತಿಳಿಸಲಾಗಿದೆ. ಅವರು ವಿಚಾರಣೆಯಲ್ಲಿ 3 ತಿಂಗಳಲ್ಲಿ ಪೂರೈಸಿಲ್ಲ. ಅವರು ಸಂಸ್ಥೆಯ ಅಧಕಾರಿಗಳಿಂದ ವಿಚಾರಣೆ ಮುಂದುವರೆಸಲು ಲಿಖಿತ ಆದೇಶ ಪಡೆದಿಲ್ಲ ಆದರೆ ಮೌಖಿಕ ಆದೇಶ ಪಡೆದಿದ್ದಾರೆ. ಕೋರ್ಟಿಲ್ಲಿ ಹಾಜರುಪಡಿಸಿದ ನಿ.ಎಂ. 8 ಸಾಕ್ಷಿ ಹೇಳಿಕೆ ಹಾಗೂ ಪಾಟೀ ಸವಾಲು. ನಿ.ಎಂ.5 ವಿಚಾರಣಾ ಸೂಚನಾ ಪತ್ರ 19.12.2014 ರದಾಗಿದೆ. ಅದರಲ್ಲಿ ಆಡಳಿತ ಪರ ಸಾಕ್ಷಿಗಾಗಿ ಎಂದು ಕೊಡಲಾಗಿದೆ. ವಿಚಾರಣಾ ಸೂಚನ ಪತ್ರ ದಿ.14.11.2014 ರಲ್ಲಿ ಸಂರಕ್ಷಣಾತ್ಮಕ ಹೇಳಿಕೆ ಎಂದು ಕೊಡಲಾಗಿದೆ. 30.10.2014 ರ ಸೂಚನಾ ಪತ್ರದಲ್ಲಿ ಪಾಟೀ ಸವಾಲಿಗೆ ಅಂತಿಮ ಅವಕಾಶವೆಂದು ಕೊಡಲಾಗಿದೆ. ಒಟ್ಟು 6 ವಿಚಾರಣಾ ಸೂಚನಾ ಪತ್ರಗಳನ್ನು ಕೊಟ್ಟಿದ್ದಾರೆ (ದಾಖಲೆ ಪ್ರಕಾರ). 19.12.2014 ರ ವಿಚಾರಣಾ ಕೊಟ್ಟಿರುವ ಸೂಚನಾ ಪತ್ರವನ್ನು ಇಲ್ಲಿ ಹಾಜರುಪಡಿಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಆಡಳಿತ ಪರ ಸಾಕ್ಷಿ ಯಾದ ಮೇಲೆ 1 ನೇ ಪಾರ್ಟಿಗೆ ಸಾಕ್ಷಿ ಯಾವುದು ಹಾಜರುಪಡಿಸಿಲ್ಲದ ಕಾರಣ ಸಂರಕ್ಷಣಾತ್ಮಕ ಹೇಳಿಕೆಗೆ ಅಂತ ಹೇಳಿದ್ದೇನೆ. ಈ ವಿಚಾರಣೆಯಲ್ಲಿ ಸಂಸ್ಥೆಯ

ಹೊರತುಪಡಿಸಿ ಪ್ರಯಾಣಿಕರು ಇಬ್ಬರು ಸಾಕ್ಷಿ ಹೇಳಿದ್ದಾರೆ. ವಿಚಾರಣಾಧಿಕಾರಿ ನೇಮಕಾತಿ ಆದೇಶ ಎಂ.4 ರಲ್ಲಿ ಶ್ರೀಶೈಲ ಅಂಗಡಿ ರವರನ್ನು ವಿಚಾರಣೆ ನಡೆಸಲು ಹೇಳಿದ್ದಾರೆ. ಇದೇ ಪ್ರಕರಣದಲ್ಲಿ 1 ನೇ ಪಾರ್ಟಿ ಅಲ್ಲದೆ ಆರು ಜನ ಆರೋಪಿತರು ಇದ್ದಾರೆ. ನಿ.ಎಂ.7 ಕ್ಕೆ 1 ನೇ ಪಾರ್ಟಿ ವಿಚಾರಣಾ ಪದ್ಧತಿ ಬಗ್ಗೆ ತನಗೆ ಗೊತ್ತಿದ್ದೆ ಎನ್ನುವ ಬಗ್ಗೆ ಉತ್ತರ ಕೊಟ್ಟಿಲ್ಲ ಎಂದರೆ ಅದಕ್ಕೆ ಸಹಿ ಮಾಡಿದ್ದಾರೆ. 1 ನೇ ಪಾರ್ಟಿ ಅದರಲ್ಲಿ ಎಸ್.ಡಿ. ಬಂಡಿ ರವರನ್ನು ಸಹೋದ್ಯೋಗಿಯಾಗಿ ನೇಮಿಸಿಕೊಳ್ಳಲು ಕೇಳಿದ್ದರು, ಆ ಬಗ್ಗೆ ಅವರಿಗೆ ಅವಕಾಶ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೆ ಪಾರ್ಟಿ ಅವರನ್ನು ಬದಲಾಗಿ ಬೇರೆಯವರನ್ನಾಗಿ ಸಹೋದ್ಯೋಗಿಯಾಗಿ ನೇಮಿಸಿಕೊಂಡಿದ್ದಾರೆ. ಬೇರೆ ಸಹೋದ್ಯೋಗಿಯನ್ನು ಕರೆತಂದ ಬಗ್ಗೆ ಅನುಮತಿ ಆದೇಶ ಮಾಡಿರುವುದಿಲ್ಲ. ತಮನ ವಿಚಾರಣೆ ನಿರ್ಣಯದಲ್ಲಿ ಆರು ಜನ ಆರೋಪಿತರ ಬಗ್ಗೆ ವಿಚಾರಣೆ ನಡೆಸಲು ಆದೇಶಿಲಾಗಿದೆ ಎಂದು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಿ.ಎಂ.11 ರಲ್ಲಿ ಆರು ಜನರದು ಪ್ರತ್ಯೇಕ ಆರೋಪವಿದೆ ಎಂದರೆ ಸರಿ. ಈ ವಿಚಾರಣೆಯಲ್ಲಿ ಆರು ಜನರ ಬಗ್ಗೆ ಆದೇಶವಿಲ್ಲದಿದ್ದರೂ ಒಟ್ಟಿಗೆ ವಿಚಾರಣೆ ಮಾಡಿದ್ದಾರೆ ಎಂದರೆ ಸಾಕ್ಷಿ ಒಂದೆ ಘಟನೆಯಾಗಿದ್ದರಿಂದ ಒಟ್ಟಿಗೆ ವಿಚಾರಣೆ ಮಾಡಿದ್ದಾರೆ. ವಿಚಾರಣೆ ನಿರ್ಣಯದಲ್ಲಿ ಪ್ರತಿಯೊಬ್ಬರಿಂದ 61,400-00 ರೂ. ನಷ್ಟವಾಗಿದ್ದು ಅದಕ್ಕೆ ಹೊಣೆಗಾರರೆಂದು ನಿರ್ಣಯ ಕೊಟ್ಟಿದ್ದಾರೆ. ವರದಿಗಾರರು ವಿಚಾರಣೆಯ ಸಮಯದಲ್ಲಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 28.5.2017 ನಿ.ಎಂ.8 ರ ಹೇಳಿಕೆಯಲ್ಲಿ ಅದು ಕಾಣುತ್ತದೆ. ಆ ಸಮಯದಲ್ಲಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕೇಸಿನ ವಿಚಾರಣೆ ದೋಷಪೂರಿತವಾಗಿದೆ ಎಂದರೆ ಸರಿಯಲ್ಲ. ಸಾಮಾಜಿಕ ನ್ಯಾಯಕ್ಕೆ ವಿರುದ್ದವಾಗಿ ವರದಿ ಕೊಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು. )

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ. )

(ಲೆಕ್ಕದಪ್ಪ ಜಂಬಿಗಿ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.